# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ತಾಂತ್ರಿಕ ಅಧಿಕಾರಿಗಳು ಒಂದೇ ಸೂರಿನಡಿ ಕಾರ್ಯ ನಿರ್ವಹಿಸುವ ಬಗ್ಗೆ.

ಓದಲಾಗಿದೆ:

1) ಮಾನ್ಯ ಕೃಷಿ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 28-05-2014 ರಂದು ನಡೆದ ಸಭೆಯ ನಡವಳಿಗಳು.
2) ದಿನಾಂಕ: 10.07.2014 ರ ಅನಧಿಕೃತ ಟಿಪ್ಪಣಿ ಸಂಖ್ಯೆ: ತೋಇ 110 ತೋಸವಿ 2014.

*****

<u>ಪ್ರಸ್ತಾವನೆ</u> :

ರೈತ ಸಂಪರ್ಕ ಕೇಂದ್ರ ಮಟ್ಟದಲ್ಲಿ ರೈತರ ಹಿತದೃಷ್ಟಿಯಿಂದ ಸಿಬ್ಬಂದಿಗಳನ್ನು ಬಲಪಡಿಸುವುದು ಹಾಗೂ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳ ಸಂಬಂಧಪಟ್ಟ ಸಮಗ್ರ ಮಾಹಿತಿಯನ್ನು ಒಂದೇ ಸೂರಿನಡಿ ರೈತರಿಗೆ ನೀಡುವ ಬಗ್ಗೆ ದಿನಾಂಕ: 28-05-2014 ರಂದು ಮಾನ್ಯ ಕೃಷಿ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಉಪಸ್ಥಿತಿಯಲ್ಲಿ ಉಲ್ಲೇಖ (1) ರಲ್ಲಿ ಪ್ರಸ್ತಾಪಿಸಿರುವ ಸಭೆ ನಡೆಸಲಾಯಿತು.

ಈ ಮೊದಲು ಪ್ರತಿ 800 ಕೃಷಿ ಕುಟುಂಬಗಳಿಗೆ ಒಬ್ಬ ಕೃಷಿ ಸಹಾಯಕರಂತೆ ಹೋಬಳಿ/ಗ್ರಾಮ ಪಂಚಾಯಿತಿಮಟ್ಟದಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಗ್ರಾಮಗಳಿಗೆ ಭೇಟಿ ನೀಡಿ ರೈತರಿಗೆ ಅಗತ್ಯ ಸಲಹೆಗಳನ್ನು ನೀಡುತ್ತಿದ್ದರು. ಅಂದಿನ ದಿನಗಳಲ್ಲಿ ಕೃಷಿ ಸಹಾಯಕರೊಬ್ಬರೇ ಮಾಹಿತಿ ನೀಡಲು ಸಂಪನ್ಮೂಲರಾಗಿದ್ದರು.

ರೈತರಲ್ಲಿ ಮೊದಲಿಗಿಂತಲೂ ತಾಂತ್ರಿಕ ಜ್ಞಾನ ಹೆಚ್ಚಿಗೆ ಇರುವುದರಿಂದ ಬದಲಾದ ಸನ್ನಿವೇಶದಲ್ಲಿ ಆಧುನಿಕ ತಾಂತ್ರಿಕತೆಯನ್ನು ಬಳಸಿಕೊಂಡು ರೈತರಿಗೆ ಸೂಕ್ತ ಮಾರ್ಗದರ್ಶನ ಹಾಗೂ ರೈತರಿಗೆ ಬೇಕಾದಂತಹ ತಾಂತ್ರಿಕ ಮಾಹಿತಿಯನ್ನು ನೀಡಬೇಕಾಗಿರುವುದರಿಂದ ಮೂರು ಇಲಾಖೆಗಳ ಕಾರ್ಯ ಚಟುವಟಿಕೆಗಳ ಸಮನ್ವಯ ಮಾಡಿ, ಹೋಬಳಿ ಮಟ್ಟದಲ್ಲಿ ಮೂರು ಇಲಾಖೆಗಳ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸಿ ಜಾರಿಗೊಳಿಸುವುದು ಅಗತ್ಯವಿರುತ್ತದೆ.

ರೈತ ಸಂಪರ್ಕ ಕೇಂದ್ರಗಳಲ್ಲಿ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ ಕೃಷಿ ಅಧಿಕಾರಿಗಳು ಕೃಷಿ ಪರಿಕರ, ಕೃಷಿ ಯಂತ್ರೋಪರಣ ಹಾಗೂ ಇತರೆ ಪರಿಕರ ಮಾರಾಟ ಕೆಲಸ ನಿರ್ವಹಿಸುವುದನ್ನು ತಪ್ಪಿಸಿ ರೈತ ಸಂಪರ್ಕ ಕೇಂದ್ರಗಳಲ್ಲಿ ಒಬ್ಬ ಲೆಕ್ಕಪತ್ರ ನಿರ್ವಹಣೆಗೆ ಪದವೀಧರರನ್ನು ನೇಮಿಸಿ ಕೃಷಿ ಅಧಿಕಾರಿ ಸೇವೆಯನ್ನು ಬೇರೆ ವಿಸ್ತರಣಾ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಉದ್ದೇಶದಿಂದ ಪ್ರಸ್ತುತ ವರ್ಷದಿಂದ ಗುತ್ತಿಗೆ ಆಧಾರದ ಮೇಲೆ ಒಂದು ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬ ಪದವೀಧರರನ್ನು ಕೊಟ್ಟು ಅವರ ಉಸ್ತುವಾರಿಯಾಗಿ ಕೃಷಿ ಅಧಿಕಾರಿಗಳನ್ನು ನೇಮಿಸಲಾಗಿದೆ.

ಮೇಲಿನ ಉಲ್ಲೇಖ (2) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ 'ರೈತ ಸಂಪರ್ಕ ಕೇಂದ್ರ ಮಟ್ಟದಲ್ಲಿ ರೈತರ ಹಿತದೃಷ್ಟಿಯಿಂದ ಸಿಬ್ಬಂದಿಗಳನ್ನು ಬಲಪಡಿಸಲು ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಒಂದೇ ಸೂರಿನಡಿ ರೈತರಿಗೆ

ಒದಗಿಸುವ ದೃಷ್ಟಿಯಿಂದ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ತಾಂತ್ರಿಕ ಅಧಿಕಾರಿಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ನಿಯೋಜಿಸಲು ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಸಹಮತಿ ನೀಡಲಾಗಿದೆ' ಎಂದು ಅಭಿಪ್ರಾಯ ನೀಡಿದೆ.

ರೈತ ಸಂಪರ್ಕ ಕೇಂದ್ರದಲ್ಲಿ ಸಿಬ್ಬಂದಿಗಳು ರೈತರಿಗೆ ಬೇಕಾದಂತಹ ತಾಂತ್ರಿಕ ಮಾಹಿತಿಯನ್ನು ಒಂದೆಡೆ ನೀಡುವ ದೃಷ್ಟಿಯಿಂದ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಕಾರ್ಯ ಚಟುವಟಿಕೆಗಳನ್ನು ಸಮನ್ವಯ ಮಾಡಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 108 ಕೃಯೋಕಾ 2013**
**ಬೆಂಗಳೂರು, ದಿನಾಂಕ: 17.07.2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರೈತ ಸಂಪರ್ಕ ಕೇಂದ್ರ ಮಟ್ಟದಲ್ಲಿ ರೈತರ ಹಿತದೃಷ್ಟಿಯಿಂದ ಸಿಬ್ಬಂದಿಗಳನ್ನು ಬಲಪಡಿಸುವುದು ಹಾಗೂ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳ ಸಂಬಂಧಪಟ್ಟ ಸಮಗ್ರ ಮಾಹಿತಿಯನ್ನು ಒಂದೇ ಸೂರಿನಡಿ ರೈತರಿಗೆ ಒದಗಿಸುವ ದೃಷ್ಟಿಯಿಂದ ಕೃಷಿ ಆಯುಕ್ತರು, ಆಯುಕ್ತರು, ರೇಷ್ಮೆ ಇಲಾಖೆ ಮತ್ತು ನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರುಗಳು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಆದೇಶಿಸಿದೆ.

(1) ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಗಳ ತಾಂತ್ರಿಕ ಅಧಿಕಾರಿಗಳನ್ನು ಒಂದೇ ಸೂರಿನಡಿ ಕಾರ್ಯ ನಿರ್ವಹಿಸಲು ಕ್ರಮ ಕೈಗೊಳ್ಳುವುದು.

(2) ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಬೆಳೆಗಳಿಗೆ ಸಂಬಂಧಿಸಿದಂತೆ ಎಲ್ಲಾ ತಾಂತ್ರಿಕ ಮಾಹಿತಿ ತಯಾರಿಸಿಟ್ಟುಕೊಳ್ಳುವುದು. ಎಲ್ಲಾ ಸಿಬ್ಬಂದಿಗಳಿಗೆ ಎಲ್ಲಾ ಇಲಾಖೆಯ ಯೋಜನೆಗಳ ಬಗ್ಗೆ ಅರಿವು ಇರುವಂತೆ ಕ್ರಮವಹಿಸುವುದು.

(3) ರೈತ ಸಂಪರ್ಕ ಕೇಂದ್ರಕ್ಕೆ ನಿಯೋಜಿಸಲಾದ ಎಲ್ಲಾ ಮೂರು ಇಲಾಖೆಗಳ ತಾಂತ್ರಿಕ ಅಧಿಕಾರಿಗಳಿಗೆ ಹಾಗೂ ರೈತ ಅನುವುಗಾರರಿಗೆ, ರೈತರಿಗೆ ಬೇಕಾದಂತಹ ತಾಂತ್ರಿಕ ಮಾಹಿತಿಗಳ ಬಗ್ಗೆ ಮೂರೂ ಇಲಾಖೆಗಳು ಕಾಲ ಕಾಲಕ್ಕೆ ತರಬೇತಿಯನ್ನು ನೀಡುವುದು.

(4) ~~ಸೂಕ್ಷ್ಮ ನೀರಾವರಿ, ಟ್ರಾಕ್ಟರ್ ಹಾಗೂ~~ ಇತರೆ ಕೃಷಿ ಪರಿಕರಗಳನ್ನು ಇಲಾಖೆಗಳಿಂದ ಸೌಲಭ್ಯ/ಸಹಾಯಧನಗಳನ್ನು ವಿತರಿಸುತ್ತಿರುವುದರಿಂದ ಒಬ್ಬನೇ ಫಲಾನುಭವಿಯು 3 ಇಲಾಖೆಗಳಿಂದ ಸವಲತ್ತು ಪಡೆಯುವುದನ್ನು ಪುನರಾವರ್ತನೆಯಾಗದಂತೆ ತಡೆಗಟ್ಟಲು ಕ್ರಮವಹಿಸತಕ್ಕದ್ದು.

(5) ರಿಯಾಯಿತಿ ದರದಲ್ಲಿ ಒದಗಿಸುವ ಕೃಷಿ ಯಂತ್ರೋಪಕರಣಗಳು, ಹನಿ ನೀರಾವರಿ/ತುಂತುರು ನೀರಾವರಿ ಉಪಕರಣಗಳು, ಸಸ್ಯ ಸಂರಕ್ಷಣೆ ಉಪಕರಣಗಳು ಮತ್ತು ಜೈವಿಕ ಗೊಬ್ಬರ ಮುಂತಾದವುಗಳನ್ನು ಒಂದೇ ದರದಲ್ಲಿ ನಿಗಧಿಪಡಿಸಿ, ಅಂದರೆ ಈಗಾಗಲೇ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳನ್ನು ತೋಟಗಾರಿಕೆ ಇಲಾಖೆಯವರು ನಿಗಧಿಪಡಿಸಿದ ದರದಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅನುಸರಿಸುತ್ತಿದೆ. ಇದೇ ರೀತಿಯಲ್ಲಿ ಕೃಷಿ ಪರಿಕರಗಳನ್ನು ಒಂದು ಇಲಾಖೆ ನಿಗಧಿಪಡಿಸಿದ ದರಗಳನ್ನು ಇತರೆ ಇಲಾಖೆಗಳು ಅನುಸರಿಸಬೇಕು.

(6) ರೈತ ಸಂಪರ್ಕ ಕೇಂದ್ರದಲ್ಲಿ ವಾರದಲ್ಲಿ ಯಾವ ಯಾವ ದಿವಸ ಈ ತಾಂತ್ರಿಕ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರುವ ಬಗ್ಗೆ ನಮೂದಿಸುವುದು. ತ್ರೈಮಾಸಿಕ ಕಾರ್ಯಕ್ರಮಸೂಚಿಯನ್ನು ತಯಾರಿಸುವುದು ಮತ್ತು ರೈತರಿಗೆ ಲಾಭವಾಗುವ ರೀತಿಯಲ್ಲಿ ಅಗತ್ಯ ಪ್ರಚಾರವನ್ನು ಮಾಡುವುದು.

(7) ರೈತ ಸಂಪರ್ಕ ಕೇಂದ್ರದಲ್ಲಿ ರೇಷ್ಮೆ, ತೋಟಗಾರಿಕೆ ಮತ್ತು ಕೃಷಿ ಇಲಾಖೆಯ ತಾಂತ್ರಿಕ ಸಿಬ್ಬಂದಿಗಳನ್ನು ನಿಯೋಜಿಸುವುದರಿಂದ scheme duplication ಆಗುವುದನ್ನು ತಡೆಗಟ್ಟುವುದರ ಜೊತೆಗೆ ಸಿಬ್ಬಂದಿ ಕೊರತೆಯನ್ನು ಸರಿದೂಗಿಸಲು ಕ್ರಮ ತೆಗೆದುಕೊಳ್ಳುವುದು.

(8) ಕೃಷಿ ಇಲಾಖೆಯಲ್ಲಿ ಹೊಸದಾಗಿ ನಿರ್ಮಿಸಿದ 234 ಸ್ವಂತ ಕಟ್ಟಡಗಳಿದ್ದು, ಇವುಗಳಲ್ಲಿ ಮೂರೂ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಿಸುವುದು. ಉಳಿದ ಸ್ಥಳಗಳಲ್ಲಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಕಟ್ಟಡಗಳನ್ನು ಪರಿಶೀಲಿಸಿ ಉತ್ತಮ ಸೌಲಭ್ಯವಿದ್ದಲ್ಲಿ ಅಂತಹ ಸ್ಥಳಗಳಲ್ಲಿ ಮೂರೂ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಿಸುವುದು.

(9) ರೈತ ಸಂಪರ್ಕ ಕೇಂದ್ರದಲ್ಲಿ ಎಲ್ಲಾ ಮಾಹಿತಿಯು ಆನ್ ಲೈನ್ ಮುಖಾಂತರ ದತ್ತಾಂಶಗಳನ್ನು ಸಂಗ್ರಹಿಸಲು ಕ್ರಮವಹಿಸುವುದು.

(10) ರೈತ ಸಂಪರ್ಕ ಕೇಂದ್ರದ ಉಸ್ತುವಾರಿಯಾಗಿ ಕೃಷಿ ಅಧಿಕಾರಿಗಳನ್ನು ನೇಮಿಸುವುದು.

(11) ಸಾರ್ವಜನಿಕರ ಹಾಗೂ ಪರಿವೀಕ್ಷಣೆಗೆ ಬರುವ ಅದಿಕಾರಿಗಳ ಉಪಯೋಗಕ್ಕಾಗಿ ಪ್ರತೀ ರೈತ ಸಂಪರ್ಕ ಕೇಂದ್ರದಲ್ಲಿ ಭೇಟಿಯ ವಹಿ ಮತ್ತು ಸಲಹಾ ಪೆಟ್ಟಿಗೆಗಳನ್ನು ಇಡುವುದು.

ಈ ಆದೇಶವನ್ನು ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

02/8/11

**(ಜ್ಯೋತಿ ಆರ್.ಜಿ.),**
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ),
ಕೃಷಿ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು (ಕರ್ನಾಟಕ), ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4) ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5) ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
7) ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
8) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
9) ಆಯುಕ್ತರು, ರೇಷ್ಮೆ ಇಲಾಖೆ.
10) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
11) ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿರಸ್ತೆ, ಬೆಂಗಳೂರು.
12) ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
13) ಸರ್ಕಾರದ ಉಪ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ.
14) ಸರ್ಕಾರದ ಉಪ ಕಾರ್ಯದರ್ಶಿ, ರೇಷ್ಮೆ ಇಲಾಖೆ.
15) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.